2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ165/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಲೋಕೇಶ್ | ಪಿಡಬ್ಲ್ಯೂ - 2 |
| ತಂದೆಯ ಹೆಸರು | - | ಬಸವರಾಜಪ್ಪ | ಸಿಡಬ್ಲ್ಯೂ - 5 |
| ವಯಸ್ಸು | - | 32 ವರ್ಷ | |
| ಉದ್ಯೋಗ | - | ಆಟೋ ಚಾಲಕ | |
| ವಾಸ ಸ್ಥಳ | - | ಕಡೂರಹಳ್ಳಿ, ಕಡೂರು ತಾಲ್ಲೂಕು | |

ದಿನಾಂಕಃ 26.08.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ಪ್ರಕಾಶ್ ಗೊತ್ತು. ಆತ ಆಟೋ ಚಾಲಕನಾಗಿದ್ದನು. ಚಾಸಾ.1 ಮಮತಾ ಗೊತ್ತು. ಆಕೆ ಮೃತನ ಹೆಂಡತಿ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತಿಲ್ಲ. ಸಹ ಪಂಚನಾದ ಚಾಸಾ.6 ಗೊತ್ತು. ಆತ ಕ್ಯಾಬ್ ಚಾಲಕ. ಚಾಸಾ.2 ರಿಂದ 4 ರವರು ಗೊತ್ತಿಲ್ಲ. ಚಾಸಾ.7 ಮೃತನ ತಂದೆ. ಚಾಸಾ.9 ಗೊತ್ತು. ಉಳಿದ ಸಾಕ್ಷಿದಾರರು ಗೊತ್ತಿಲ್ಲ. ನಾನು ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ.
2. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಶವ ತನಿಖಾ ಪಂಚನಾಮೆಯಾಗಿದ್ದು, ಅದನ್ನು ನಿಪಿ.9 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ)

ಎಂದು ಗುರುತಿಸಲಾಯಿತು. ದಿನಾಂಕ 17.07.2021 ರಂದು ಚಿಕ್ಕಮಗಳೂರಿನ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಸದರಿ ಸಹಿಯನ್ನು ಮಾಡಿದ್ದೇನೆ. ಮೃತ ಮತ್ತು ಆತನ ತಂದೆ ನನಗೆ ಪರಿಚಯವಿದ್ದುದರಿಂದ ಮೃತನ ತಂದೆ ಯಾರೋ ಪ್ರಕಾಶನನ್ನು ಕೊಲೆ ಮಾಡಿರುವುದಾಗಿ ನನಗೆ ತಿಳಿಸಿ ನನ್ನನ್ನು ಆ ದಿನ ಸದರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು ಅಲ್ಲಿಗೆ ಹೋಗಿ ಪ್ರಕಾಶನ ಮೃತ ದೇಹವನ್ನು ನೋಡಿದ್ದೇನೆ. ಆತನ ಎರಡು ಕಣ್ಣುಗಳು ಊದಿದ್ದವು, ಕಪ್ಪಾಗಿದ್ದವು, ಆತನ ಹಣೆಯ ಮೇಲೆ ಹೊಡೆದಿರುವ ರೀತಿ ಪೆಟ್ಟಾಗಿತ್ತು, ಆತನ ಮೂಗು ಮತ್ತು ಬಾಯಿಯಿಂದ ರಕ್ತ ಬರುತ್ತಿತ್ತು, ಆತನ ಕುತ್ತಿಗೆಯ ಬಳಿ ಕಪ್ಪಾಗಿತ್ತು. ಅಲ್ಲಿಗೆ ಪೊಲೀಸರು ಬಂದು ಪ್ರಕಾಶನ ಶವವನ್ನು ಪರೀಕ್ಷಿಸಿ ಮಧ್ಯಾಹ್ನ 2.30 ಗಂಟೆಯಿಂದ 4.30 ಗಂಟೆಯವರೆಗೆ ನಿಪಿ.9 ರಂತೆ ಮಹಜರ್ ಮಾಡಿಕೊಂಡು ನನ್ನ ಸಹಿಯನ್ನು ಪಡೆದುಕೊಂಡರು.

3. ಪೊಲೀಸರು ಸದರಿ ಮಹಜರನ್ನು ಜರುಗಿಸುವ ಸಮಯದಲ್ಲಿ ನನ್ನೊಂದಿಗೆ ಚಾಸಾ.6 ಮನ್ಸೂರ್ ಮತ್ತು ಮೃತನ ತಂದೆಯಾದ ಚಾಸಾ.7 ತಮ್ಮಯ್ಯ ಸಹ ಹಾಜರಿದ್ದರು. ನನ್ನ ಜೊತೆ ಚಾಸಾ.6 ರವರು ಸಹ ಸದರಿ ಮಹಜರ್ ಗೆ ಸಹಿ ಮಾಡಿದ್ದಾರೆ. ನಾನು ನೋಡಿದಾಗ ಪ್ರಕಾಶನ ಮೃತ ದೇಹದ ಮೇಲೆ ಪ್ಯಾಂಟು, ಶರ್ಟು, ಬನಿಯನ್ ಇದ್ದವು.

4. ಸಾಕ್ಷಿಯು ಈಗಾಗಲೇ ನಿಪಿ.2 ರಿಂದ ನಿಪಿ.4 ಎಂದು

ಗುರುತಿಸಲಾಗಿರುವ ಫೋಟೋಗಳನ್ನು ನೋಡಿ ನಿಪಿ.2 ಮತ್ತು ನಿಪಿ.4 ಫೋಟೋಗಳಲ್ಲಿ ಪ್ರಕಾಶನ ಮೃತ ದೇಹವಿರುವುದಾಗಿ ತಿಳಿಸಿ ನಿಪಿ.3 ಫೋಟೋದಲ್ಲಿ ತಾನು, ಚಾಸಾ.6 ರವರು ಮತ್ತು ಪ್ರಕಾಶನ ತಂದೆ ತಮ್ಮಯ್ಯ ಇರುವುದಾಗಿ ತಿಳಿಸಿರುತ್ತಾರೆ. ಸದರಿ ಫೋಟೋಗಳನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಪೊಲೀಸರು ಪ್ರಕಾಶನ ಮೃತ ದೇಹದ ಮೇಲೆ ಮಹಜರ್ ಜರುಗಿಸುವ ಸಮಯದಲ್ಲಿ ತೆಗೆದುಕೊಂಡಿರುತ್ತಾರೆ.

5. ನಿಪಿ.2 ಫೋಟೋದಲ್ಲಿ ಮೃತ ಪ್ರಕಾಶನ ಕುತ್ತಿಗೆಯ ಭಾಗದಲ್ಲಿ ಕಪ್ಪು ಗಾಯವಾಗಿರುವುದು ಕಂಡು ಬರುತ್ತದೆ. ಮಹಜರ್ ಜರುಗಿಸುವ ಸಮಯಕ್ಕೆ ನನಗೆ ಆಟೋದಲ್ಲಿ ಹೋಗಿದ್ದ ಪ್ರಕಾಶನನ್ನು ಯಾರೋ ಕೊಲೆ ಮಾಡಿ ಹಾಕಿರುವುದಾಗಿ ತಿಳಿಯಿತು.

<u>ಪಾಟೀ ಸವಾಲುಃ ಶ್ರೀಮತಿ ಕೆ ಎಂ ಕೆ ಆರೋಪಿತರ ಪರ ವಕೀಲರಿಂದಃ</u>

6. ಮೃತ ಪ್ರಕಾಶ, ಆತನ ಹೆಂಡತಿಯಾದ ಚಾಸಾ.1 ಮತ್ತು ಮೃತನ ತಂದೆ ನಿಮಗೆ ಪರಿಚಿತರು ಎಂದರೆ ಸರಿ. ನೀವು ಮತ್ತು ಅವರು ಒಂದೇ ಊರಿನವರು ಎಂದರೆ ಸರಿ. ನೀವು ಮತ್ತು ಮೃತ ಪ್ರಕಾಶ ಒಂದೇ ಊರಿನಲ್ಲಿ ಆಟೋ ಓಡಿಸಿಕೊಂಡಿದ್ದಿರಿ ಎಂದರೆ ಸರಿ. ಪ್ರಕಾಶ ಮೃತಪಟ್ಟಿರುವುದಾಗಿ ಊರಿನಲ್ಲಿ ಜನರು ಮಾತನಾಡಿಕೊಳ್ಳುತ್ತಿದ್ದುದರಿಂದ ನನಗೆ ತಿಳಿಯಿತು. ಮೃತ ಪ್ರಕಾಶ ಮತ್ತು ಆತನ ಕುಟುಂಬದವರು ನಿಮ್ಮ

ಊರಿನವರಾಗಿರುವ ಕಾರಣ ಪ್ರಕಾಶನ ಶವವನ್ನು ನೋಡಿ, ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿದ್ದೀರಿ ಹೊರತುಪಡಿಸಿ ನೀವು ಪ್ರಕಾಶನ ಮೃತ ದೇಹವನ್ನು ಸರಿಯಾಗಿ ನೋಡಿಲ್ಲ ಎಂದರೆ ಸರಿ. ದಿನಾಂಕ 17.07.2021 ರಂದು ಮಧಾಹ್ನ 12.00 ಗಂಟೆಯಿಂದ 1.00 ಗಂಟೆಯ ಒಳಗೆ ಶವ ತನಿಖಾ ಪಂಚನಾಮೆಯನ್ನು ಜರುಗಿಸಲಾಗಿದೆ ನೀವು ಹೇಳಿದಂತೆ ಮಧ್ಯಾಹ್ನ 2.30 ಗಂಟೆಯಿಂದ 4.30 ಗಂಟೆಯವರೆಗೆ ಜರುಗಿಸಿಲ್ಲ ಎಂದರೆ ಸರಿಯಲ್ಲ.

7. ಪ್ರಕಾಶನ ಮೃತ ದೇಹದ ಮೇಲೆ ಪ್ಯಾಂಟು, ಶರ್ಟು, ಬನಿಯನ್ ಇದ್ದವು ಎಂದು ಹೇಳಿದ್ದೀರಿ ಅವುಗಳ ಬಣ್ಣ ಯಾವುದು ಎಂದರೆ ಸಾಕ್ಷಿ ಅವುಗಳ ಬಣ್ಣ ಈಗ ನನಗೆ ನೆನಪಿಲ್ಲ ಎನ್ನುತ್ತಾರೆ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.